ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1924/2019

ಚಾಸಾ:3 ಪ್ರಾಸಾ:3

ದಿನಾಂಕ: 03.06.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಸವೇರಾ ಡಿ ಕೋಸ್ತಾ |
| ತಂದೆಯ ಹೆಸರು | : | ಲಾದ್ರೂ ಕೋತಾ |
| ವಯಸ್ಸು | : | 78 ವರ್ಷ |
| ಉದ್ಯೋಗ | : | ಮನೆಯಲ್ಲಿ ಇರುವುದು |
| ವಾಸ ಸ್ಥಳ | : | ಕೋಣಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಪ್ರಾಸಾ-1 ನನ್ನ ತಮ್ಮ. 1ನೇ ಆರೋಪಿ ಆತನ ಹೆಂಡತಿ, 2ನೇ ಆರೋಪಿ ಆತನ ಮಗ. ಪ್ರಾಸಾ-2 ನನ್ನ ಹೆಂಡತಿ.

2019ರಲ್ಲಿ ಪ್ರಾಸಾ-1 ರವರಿಗೆ ಸೇರಿದ ಹಿತ್ತಲಿನಿಂದ 1ನೇ ಆರೋಪಿ ಕಟ್ಟಿಗೆ ಮತ್ತು ತೆಂಗಿನ ಕಾಯಿ ತೆಗೆದುಕೊಂಡು ಬರುತ್ತಿದ್ದು, ಪ್ರಾಸಾ-1 ರವರು ಹಿತ್ತಲಿಗೆ ಹೋಗುವ ದಾರಿಯಲ್ಲಿ ಕೆಂಪು ಕಲ್ಲನ್ನು ಕಟ್ಟಿದ್ದರು. 1ನೇ ಆರೋಪಿ ಸದ್ರಿ ಕಲ್ಲನ್ನು ದೊಣ್ಣೆಯಿಂದ ದೂಡಿ ಹಾಕಿದಾಗ ಇಬ್ಬರಿಗೂ ಗಲಾಟೆಯಾಗಿ 1ನೇ ಆರೋಪಿ ದೊಣ್ಣೆಯಿಂದ ಪ್ರಾಸಾ-1 ರವರಿಗೆ ಹೊಡೆದಿರುತ್ತಾರೆ. ಆಗ ಸಂಜೆ 5-30ರ ಸಮಯವಾಗಿತ್ತು. ಪ್ರಾಸಾ-1 ರವರನ್ನು ಆಕೆ ಅವಾಚ್ಯವಾಗಿ ನಿಂಧಿಸಿರುತ್ತಾರೆ. ಆಗ ನಾನು ಮತ್ತು ಪ್ರಾಸಾ-2ರವರು ಇದ್ದೇವು. ಪ್ರಾಸಾ-1 ರವರ ಬೆನ್ನಿಗೆ ಪೆಟ್ಟಾಗಿದ್ದು ಆತ ಸರಕಾರಿ ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾರೆ.

ಆಗ 2ನೇ ಆರೋಪಿ ಪ್ರಾಸಾ-1 ರವರಿಗೆ ಕಾಲಿನಿಂದ ತುಳಿದಿರುತ್ತಾರೆ. ಬಿಡಿಸಲು ಹೋದ ನನಗೆ ಕಾಲಿನಿಂದ ತುಳಿದಿರುತ್ತಾರೆ. ನಮ್ಮಿಬ್ಬರನ್ನೂ ಅವಾಚ್ಯವಾಗಿ ನಿಂಧಿಸಿರುತ್ತಾರೆ. ನಾನು ಚಿಕಿತ್ಸೆ ಪಡೆದಿರುತ್ತೇನೆ. ಪೊಲೀಸರು ಮನೆಗೆ ಬಂದಿದ್ದಾಗ ಈ ವಿಚಾರವಾಗಿ ದಿ: 06-04-2019 ರಂದು ಹೇಳಿಕೆ ನೀಡಿರುತ್ತೇನೆ.

ಸಾಕ್ಷಿ 1ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮುಮಾ1 ನ್ನು ನೋಡಿ ಗುರುತಿಸಿರುತ್ತಾರೆ.

**ವಾಟೀ ಸವಾಲು : ಆರೋಪಿ ಪರ ಶ್ರೀ ಬಿ . ಆರ್ ಎನ್ ವಕೀಲರವರಿಂದಃ**

ನನ್ನ ವಿರುದ್ದ ಪ್ರಕರಣ ದಾಖಲಾಗಿದ್ದು ಅದರಲ್ಲಿ ಹಾಜರಾಗುತ್ತಿದ್ದೇನೆ. ನಾನು ಪ್ರಾಸಾ-1 ರವರಿಗೆ ಪ್ರೋತ್ಸಾಹಿಸಿದ್ದೇನೆ ಎಂದು ಆರೋಪಿತರ ಮೇಲೆ ಹಲ್ಲೆಯಾಗಿದೆ ಎಂಬ ಹಿನ್ನೆಲೆಯಲ್ಲಿ ನನ್ನ ವಿರುದ್ದ 2 ಪ್ರಕರಣಗಳು ದಾಖಲಾಗಿರುತ್ತವೆ ಎಂದರೆ ಸರಿ. ನನ್ನ ಮಗ ಪ್ರಕಾಶ ಡಿ ಕೋಸ್ತಾ. ಪ್ರಾಸಾ-2 ನನ್ನ ಹೆಂಡತಿ. ನಮ್ಮ ಮನೆಯ ಸುತ್ತಮುತ್ತಲು 5-6 ಮನೆಗಳು ಇವೆ. ಪ್ರಕರಣವಾಗುವ 6-7 ವರ್ಷಗಳ ಮೊದಲಿನಿಂದಲೂ 1ನೇ ಆರೋಪಿ ಮತ್ತು ಪ್ರಾಸಾ-1ರವರ ನಡುವೆ ತಕರಾರು ಇತ್ತು. ಪ್ರಾಸಾ-1ರವರು 1ನೇ ಆರೋಪಿಯನ್ನು ಕತ್ತಿಯಿಂದ ಕಡಿದಿದ್ದಾರೆ ಎಂದು ಆತನ ವಿರುದ್ದ ಪ್ರಕರಣ ದಾಖಲಾಗಿದೆ ಎಂದರೆ ಸರಿ.

ಪ್ರಾಸಾ-1 ಮತ್ತು 1ನೇ ಆರೋಪಿ ಒಂದೇ ಮನೆಯ ಪ್ರತ್ಯೇಕ ಭಾಗಗಳಲ್ಲಿ ಇದ್ದರು. ಸದ್ರಿ ಮನೆಯಲ್ಲಿ ಇರಬಾರದೆಂದು ಪ್ರಾಸಾ-1 ರವರು ಪ್ರತಿನಿತ್ಯ ತಕರಾರು ಮಾಡುತ್ತಿದ್ದರು ಎಂದರೆ ಇಬ್ಬರೂ ಮಾಡುತ್ತಿದ್ದರು. ನನ್ನ ತಮ್ಮನಾದ ಕಾರಣ ನಾನು ಪ್ರಾಸಾ-1 ರವರನ್ನು ವಹಿಸಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೆಂಪು ಕಲ್ಲಿನ ಪಾಗಾರವನ್ನು ದಾರಿಯಲ್ಲಿ 1ನೇ ಆರೋಪಿ ತಿರುಗಾಡಬಾರದೆಂದು ಕಟ್ಟಿರುತ್ತಾರೆ ಎಂದರೆ ಸರಿ. ಸದ್ರಿ ದಾರಿಯನ್ನು ಘಟನೆ ಸಂಭವಿಸುವ 7 ವರ್ಷಗಳ ಹಿಂದೆ ಪಾಗಾರ ಕಟ್ಟಿ ಬಂದ್ ಮಾಡಿರುತ್ತಾರೆ. 1ನೇ ಆರೋಪಿ ಕೋಲಿನಿಂದ ಪಾಗಾರ ಕೆಡವಿರುವುದನ್ನು ನಾನು ನೋಡಿರುತ್ತೇನೆ. ಪೊಲೀಸರು ನನ್ನನ್ನು ಯಾವ ದಿನದಂದು ವಿಚಾರಣೆ ಮಾಡಿದ್ದು ಎಂದು ನೆನಪಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಬರೆದುಕೊಂಡಿದ್ದಾರಾ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಏನು ಬರೆದುಕೊಂಡಿದ್ದಾರೆ ಎಂದು ನನಗೆ ತಿಳಿದಿಲ್ಲ.

1ನೇ ಆರೋಪಿ ಕೆಂಪು ಕಲ್ಲಿನ ಪಾಗಾರವನ್ನು ದೂಡಿ ಹಾಕಿದ್ದಾರೆ ಎಂದು ನಾನು ನೀಡಿದ ಹೇಳಿಕೆಯನ್ನು ಪೊಲೀಸರು ಬರೆದುಕೊಂಡಿದ್ದಾರಾ ಎಂದು ನನಗೆ ತಿಳಿದಿಲ್ಲ. ಮುಮಾ1 ರಂತಹ ದೊಣ್ಣೆ ಸಾಮಾನ್ಯವಾಗಿ ಸಿಗುತ್ತವೆ ಎಂದರೆ ಸರಿ. ಪ್ರಕರಣಗಳನ್ನು ದಾಖಲಿಸಿದ ಕಾರಣದಿಂದ ಆರೋಪಿತರ ಮೇಲೆ ನನಗೆ ವೈರತ್ವ ಇದೆ ಎಂದರೆ ಸರಿ.

ಪ್ರಾಸಾ-2 ರವರು ಮಾರ್ಕೋಡುವಿನಲ್ಲಿ ವಾಸವಿದ್ದಾರೆ. ಘಟನೆಯ ವೇಳೆಗೆ ಆಕೆ ಸ್ಥಳದಲ್ಲಿ ಇದ್ದ ಬಗ್ಗೆ ಹೇಳಲಾಗುವುದಿಲ್ಲ. ಘಟನೆಯಿಂದ ನನಗೆ ಅಥವಾ ಪ್ರಾಸಾ-1 ರವರಿಗೆ ಕಾಣಿಸುವಂತಹ

ಯಾವುದೇ ಗಾಯವಾಗಿರುವುದಿಲ್ಲ. ನಾವಿಬ್ಬರೂ ಒಟ್ಟಾಗಿ ಚಿಕಿತ್ಸೆಗಾಗಿ ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ ದಾಖಲಾಗಿದ್ದಾಗ ಪೊಲೀಸರು ಹೇಳಿಕೆ ಪಡೆದಿರುತ್ತಾರೆ. ಈ ಪ್ರಕರಣವನ್ನು ಸೃಷ್ಟಿಸಲು ನಮ್ಮಿಂದ ಪೊಲೀಸರು ಅಂತಹ ಹೇಳಿಕೆಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪ್ರಾಸಾ-1 ನನ್ನ ತಮ್ಮನಾದ ಕಾರಣ ನಾನು ಮತ್ತು ಪ್ರಾಸಾ-2ರವರು ಆರೋಪಿತರ ಮೇಲೆ ಹಲ್ಲೆ ನಡೆಸುವಂತೆ ಆತನನ್ನು ಪ್ರೇರೇಪಿಸಿರುತ್ತೇವೆ ಎಂದರೆ ಸರಿಯಲ್ಲ. ಮೇಲೆ ಅಪಾದಿಸಿದ ಯಾವುದೇ ಘಟನೆ ಸಂಭವಿಸಿಲ್ಲ ಹಾಗೂ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲೆ ಪ್ರಕರಣ ದಾಖಲಾಗಿರುವ ಹಿನ್ನೆಲೆಯಲ್ಲಿ ಪ್ರತಿ ಪ್ರಕರಣವನ್ನು ಸೃಷ್ಟಿಸಲು ಆರೋಪಿತರ ಮೇಲೆ ಈ ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. ಪ್ರಾಸಾ-1ರವರು ದೂರುದಾರರಾಗಿ ನನ್ನ ತಮ್ಮನಾಗಿರುವ ಕಾರಣ ಹಾಗೂ ನನಗೆ ಆರೋಪಿತರ ಮೇಲೆ ವೈರತ್ವ ಇರುವ ಕಾರಣ ಪ್ರಕರಣಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**